ಕರ್ನಾಟಕ ಸರ್ಕಾರ

# ಜಿಲ್ಲಾಧಿಕಾರಿಗಳ ಕಾರ್ಯಾಲಯ ಯಾದಗಿರಿ

Email: dcydg123@gmail.com , ದೂರವಾಣಿ: 08473-253700 ಫ್ಯಾಕ್ಸ್: 253701

ಸಂ/ಕಂ/ಸಿಬ್ಬಂದಿ-1/137/2018-19 ದಿನಾಂಕ: 8 .03.2019

## -: ಪ್ರಕಟಣೆ :-

ಯಾದಗಿರಿ ಜಿಲ್ಲೆಯ ಕಂದಾಯ ಘಟಕದಲ್ಲಿ ಖಾಲಿ ಇರುವ 20 ಸ್ಥಳೀಯ ವೃಂದಕ್ಕೆ ಮೀಸಲಿರಿಸಿದ ಗ್ರಾಮ ಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು, ನಿಗದಿತ ಅವಧಿಯೊಳಗಾಗಿ ಸಲ್ಲಿಸಲಾದ ಅರ್ಜಿಗಳನ್ನು ಅವರುಗಳು ಪಡೆದಿರುವ ಅಂಕಗಳ ಜೇಷ್ಠತೆಯ ಮೇರೆಗೆ ಪರಿಶೀಲಿಸಿ ದಿನಾಂಕ:28.02.2019ರಂದು ರೋಷ್ಟರ್ ಮತ್ತು ಮೆರಿಟ್ ಆಧಾರದ ಮೇರೆಗೆ ತಾತ್ಕಾಲಿಕ ಪರಿಶೀಲನಾ ಪಟ್ಟಿಯನ್ನು ವೆಬ್‌ಸೈಟ್ http://yadgir.nic.inನಲ್ಲಿ **ಪ್ರಕಟಿಸಿ ಸದರಿ ತಾತ್ಕಾಲಿಕ ಪರಿಶೀಲನಾ ಪಟ್ಟಿಗೆ ಆಕ್ಷೇಪಣೆಗಳನ್ನು ಕೂಡ ಕರೆಯಲಾಗಿ, ಒಟ್ಟು (5) ಆಕ್ಷೇಪಣೆಗಳು ಸ್ವೀಕೃತಿಯಾಗಿದ್ದು, ಅವುಗಳನ್ನು ಪರಿಶೀಲಿಸಿ ಅವುಗಳ ಇತ್ಯರ್ಥ ಪಡಿಸಿದ ವಿವರವನ್ನು ಅನುಬಂಧದಲ್ಲಿ ವಿವರಿಸಿದೆ.**

**ಕಾರಣ ತಾತ್ಕಾಲಿಕ ಪರಿಶೀಲನಾ ಪಟ್ಟಿಯಲ್ಲಿನ ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನೆಯನ್ನು ದಿನಾಂಕ:11.03.2019ರಂದು ಸಮಯ ಬೆಳಿಗ್ಗೆ 10:30 ಗಂಟೆಗೆ ಯಾದಗಿರಿ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ನಡೆಸಲು ನಿಗದಿಪಡಿಸಿದ್ದು, ಸದರಿ ತಾತ್ಕಾಲಿಕ ಪಟ್ಟಿಯಲ್ಲಿನ ಎಲ್ಲಾ ಅಭ್ಯರ್ಥಿಗಳು ಈ ಕೆಳಕಂಡ ಮೂಲ ದಾಖಲೆಗಳನ್ನು ಪರಿಶೀಲನೆಗೆ ಸಂಬಂಧಪಟ್ಟ ಅಭ್ಯರ್ಥಿಗಳೇ ಖುದ್ದಾಗಿ ಹಾಜರಪಡಿಸಲು ಈ ಮೂಲಕ ತಿಳಿಸಿದೆ. ತಡವಾಗಿ ಬಂದಂತಹ ಹಾಗೂ ಮೂಲ ದಾಖಲೆಗಳನ್ನು ಸಲ್ಲಿಸಲು ವಿಫಲರಾದ ಅಭ್ಯರ್ಥಿಗಳನ್ನು ಮುಂದಿನ ಪ್ರಕ್ರಿಯೆಯಿಂದ ಕೈಬಿಡಲಾಗುವುದು ಎಂದು ಸಹ ತಿಳಿಸಿದೆ.**

1) ಎಸ್.ಎಸ್.ಎಲ್.ಸಿ ಮೂಲ ಅಂಕಪಟ್ಟಿ
2) ದ್ವಿತೀಯ ಪಿ.ಯು.ಸಿ ಮೂಲ ಅಂಕಪಟ್ಟಿ
3) ನಿಗದಿತ 371(ಜೆ) ಮೀಸಲಾತಿ ಪ್ರಮಾಣ ಪತ್ರ
4) ನಿಗದಿತ ಜಾತಿ ಮತ್ತು ಆದಾಯ ದೃಢೀಕರಣ ಪತ್ರ
5) ನಿಗದಿತ ಗ್ರಾಮೀಣ ಅಭ್ಯರ್ಥಿ ದೃಢೀಕರಣ ಪತ್ರ
6) ನಿಗದಿತ ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡಿರುವ ಬಗ್ಗೆ ದೃಢೀಕರಣ ಪತ್ರ
7) ನಿಗದಿತ ಯೋಜನಾ ನಿರಾಶ್ರಿತರ ಪ್ರಮಾಣ ಪತ್ರ
8) ಸೇವೆಯಲ್ಲಿರುವ ಬಗ್ಗೆ ದೃಢೀಕರಣ ಪತ್ರ
9) ಅರ್ಜಿ ಶುಲ್ಕ ಪಾವತಿಸಿರುವ ಬಗ್ಗೆ ಮೂಲ ಚಲನ್ ಪತ್ರ
10) ನಿಮ್ಮ ಇತ್ತೀಚ್ಚಿನ ಎರಡು ಭಾವಚಿತ್ರಗಳು

**ವಿಶೇಷ ಸೂಚನೆ:-ಮೇಲೆ ತಿಳಿಸಿದ ಎಲ್ಲಾ ದಾಖಲೆಗಳ ದೃಢೀಕೃತ ಪ್ರತಿಗಳನ್ನು ತಪ್ಪದೇ ಹಾಜರುಪಡಿಸತಕ್ಕದ್ದು.**

8/3/19

ಜಿಲ್ಲಾಧಿಕಾರಿಗಳು,
ಯಾದಗಿರಿ.